# ಕರ್ನಾಟಕ ಸರ್ಕಾರ
# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003**

**ಸಂಖ್ಯೆ: ಕ್ಯೂ9/ಕೆ.ಓ.ಎಸ್/ಪರೀಕ್ಷೆ/ಮಾರ್ಚ್/ಏಪ್ರಿಲ್ 2019/35/2018-19** **ದಿನಾಂಕ:26.12.2018**

## ಅಧಿಸೂಚನೆ

ವಿಷಯ: ಮಾರ್ಚ್/ಏಪ್ರಿಲ್-2019ರ ಮಾಹೆಯಲ್ಲಿ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ರಾಜ್ಯದ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ.73.ಎಸ್.ಎಲ್.ಬಿ.2006; ದಿನಾಂಕ:06.09.2006.
2. ಸರ್ಕಾರದ ಆದೇಶ ಸಂಖ್ಯೆ: ಇಡಿ.209.ಎಸ್.ಎಲ್.ಬಿ.2013; ದಿನಾಂಕ:06.12.2014.
3. ಸರ್ಕಾರದ ಆದೇಶ ಸಂಖ್ಯೆ: ಇಡಿ.218/ಎಸ್,ಎಲ್,ಬಿ2016; ದಿನಾಂಕ:14.12.2016.
4. ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ಪತ್ರ ಸಂಖ್ಯೆ:ಜೆ.ಎಸ್.ಎಸ್/ಕೆ.ಓ.ಎಸ್/222/2018-19; ದಿನಾಂಕ:17.12.2018.

***********

ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಯನ್ನು ಮಾರ್ಚ್/ಏಪ್ರಿಲ್-2018ರ ಮಾಹೆಯಲ್ಲಿ ದಿನಾಂಕ:21.03.2019 ರಿಂದ ದಿನಾಂಕ:04.04.2019 ರವರಿಗೆ ನಡೆಸಲು ಮಂಡಳಿಯು ನಿರ್ಧರಿಸಿದೆ. ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿದೆ. ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ವತಿಯಿಂದ ನಡೆಸಲ್ಪಡುತ್ತಿರುವ ರಾಜ್ಯದ ಎಲ್ಲಾ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಂದ ಹೊಸ ವಿದ್ಯಾರ್ಥಿಗಳು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಜಿಗಳನ್ನು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಮುಖಾಂತರ ಸಲ್ಲಿಸಬಹುದಾಗಿದೆ.

I. **ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆಗಳು:-**

1. ವಿದ್ಯಾರ್ಥಿಗಳು ಏಳನೇ ತರಗತಿಯವರೆಗೆ ಓದಿರಬೇಕು (ಏಳನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣ/ಅನುತ್ತೀರ್ಣ).
2. ಮಂಡಳಿಯು ಮಂಜೂರಾತಿ ನೀಡಿದ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ನಡೆಸಲಾಗುವುದು. ಅವಶ್ಯಕವಿದ್ದಲ್ಲಿ ಪರೀಕ್ಷಾ ಕೇಂದ್ರಗಳನ್ನು ಬದಲಾಯಿಸುವ ಅಧಿಕಾರ ಮಂಡಳಿಗೆ ಇದೆ.
3. ಸರ್ಕಾರದ ಆದೇಶ ಸಂಖ್ಯೆ:ಇಡಿ.209.ಎಸ್.ಎಲ್.ಬಿ2013 ದಿನಾಂಕ:06.12.2014ರನ್ವಯ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ನೋಂದಣಿಯಾಗುವವರಿಗೆ **ಶೈಕ್ಷಣಿಕ ವರ್ಷದ ಮಾರ್ಚ್ 1ನೇ ತಾರೀಖಿಗೆ 15 ವರ್ಷ ವಯೋಮಿತಿ ಪೂರ್ಣಗೊಂಡಿರಬೇಕು. ಅಂತಹವರು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.** ಅಂದರೆ

ಮಾರ್ಚ್/ಏಪ್ರಿಲ್-2019ರ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ 01.03.2019ಕ್ಕೆ ಹದಿನೈದು ವರ್ಷಗಳ ವಯೋಮಿತಿ ಪೂರ್ಣಗೊಂಡಿರಬೇಕು.**

4. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ (ಡಿಬಾರ್ ಆದ) ವಿದ್ಯಾರ್ಥಿಗಳನ್ನು ನೋಂದಾಯಿಸಬಾರದು. ಅಂತಹ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಂಡಿದ್ದು ಮಂಡಳಿಯ ಗಮನಕ್ಕೆ ಬಂದಲ್ಲಿ ಅಂತಹ ಕಲಿಕಾ ಕೇಂದ್ರಗಳ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

**II. ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.**

1. **ಹೊಸ ವಿದ್ಯಾರ್ಥಿಗಳು:-** ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರಿಂದ ಮಾನ್ಯತೆ ಪಡೆದು ನಡೆಸುತ್ತಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಗೆ ಹೊಸದಾಗಿ ನೋಂದಣಿಯಾಗಿ ಪ್ರಥಮ ಬಾರಿಗೆ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಸಂಕೇತ-ಆರ್.ಎಫ್ (RF) ಎಂದು ವರ್ಗೀಕರಿಸಿದೆ.
2. **ಪುನರಾವರ್ತಿತ ವಿದ್ಯಾರ್ಥಿಗಳು:-** ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಯನ್ನು ಬರೆದು ಅನುತ್ತೀರ್ಣ ಹೊಂದಿದ್ದು, ಪುನಃ ಪರೀಕ್ಷೆ ಬರೆಯಲು ಇಚ್ಛಿಸಿರುವ ವಿದ್ಯಾರ್ಥಿಗಳಿಗೆ-ಸಂಕೇತ ಆರ್.ಆರ್ (RR) ಎಂದು ವರ್ಗೀಕರಿಸಿದೆ.
3. ಪ್ರಸ್ತುತ ಪರೀಕ್ಷೆಗೆ ಪ್ರಥಮ ಬಾರಿಗೆ ಕುಳಿತುಕೊಳ್ಳುವ ಎಲ್ಲಾ ವಿದ್ಯಾರ್ಥಿಗಳಿಗೆ ಆರು ವಿಷಯಗಳು ಕಡ್ಡಾಯವಾಗಿದೆ. ಅವುಗಳಲ್ಲಿ ಪ್ರಥಮ ಭಾಷೆ-ಕನ್ನಡ ಮತ್ತು ಇನ್ನೆರಡು ಭಾಷಾ ವಿಷಯಗಳು ಕಡ್ಡಾಯವಾಗಿದೆ.

**ಈ ಕೆಳಕಂಡಂತೆ ವಿಷಯವಾರು ಅಂಕಗಳನ್ನು ನಿಗಧಿಪಡಿಸಲಾಗಿದೆ.**

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ | ಗರಿಷ್ಠ ಅಂಕಗಳು |
|---|---|---|---|
| 01 | ಪ್ರಥಮ ಭಾಷೆ ಕನ್ನಡ | 208 | 125 |
| 02 | ದ್ವಿತೀಯ ಭಾಷೆ ಇಂಗ್ಲೀಷ್ | 202 | 100 |
| 03 | ತೃತೀಯ ಭಾಷೆ ಹಿಂದಿ | 201 | 100 |
| | **ಕೋರ್ ವಿಷಯಗಳು** | | |
| 04 | ಗಣಿತ | 211 | 100 |
| 05 | ವಿಜ್ಞಾನ | 212 | 100 |
| 06 | ಸಮಾಜ ವಿಜ್ಞಾನ | 213 | 100 |
| 07 | ಅರ್ಥಶಾಸ್ತ್ರ | 214 | 100 |
| 08 | ವಾಣಿಜ್ಯ ಅಧ್ಯಯನ | 215 | 100 |
| 09 | ಗೃಹ ವಿಜ್ಞಾನ | 216 | 100 |

ಮೇಲಿನ ಆರು ಕೋರ್ ವಿಷಯಗಳಲ್ಲಿ ಯಾವುದಾದರೂ ಮೂರು ವಿಷಯಗಳನ್ನು ವಿದ್ಯಾರ್ಥಿಯು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಒಟ್ಟಾರೆ ಮೂರು ಭಾಷೆಗಳು, ಮೂರು ಕೋರ್ ವಿಷಯಗಳನ್ನು ಪ್ರಥಮ ಬಾರಿಗೆ ಅರ್ಜಿಯಲ್ಲಿ/ನಾಮಿನಲ್‌ರೋಲ್‌ನಲ್ಲಿ ನಮೂದಿಸಬೇಕು. ಒಮ್ಮೆ ವಿದ್ಯಾರ್ಥಿಯು ಆಯ್ಕೆ ಮಾಡಿರುವ ವಿಷಯಗಳು

ಅಂತಿಮವಾಗಿದ್ದು, ಯಾವುದೇ ಕಾರಣಕ್ಕೂ ವಿದ್ಯಾರ್ಥಿಯು ವಿಷಯ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಈ ವಿಷಯವನ್ನು ಸಂಬಂಧಿಸಿದ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ವಿದ್ಯಾರ್ಥಿಗಳ ಗಮನಕ್ಕೆ ತರುವುದು. ಪುನರಾವರ್ತಿತ ವಿದ್ಯಾರ್ಥಿಗಳು ಮಾತ್ರ ಅನುತ್ತೀರ್ಣ ವಿಷಯಗಳಿಗೆ ಪರೀಕ್ಷೆ ತೆಗೆದುಕೊಳ್ಳಬಹುದಾಗಿದೆ.

(i) ಸದರಿ ಪರೀಕ್ಷೆಯನ್ನು ಪ್ರಥಮಬಾರಿಗೆ ತೆಗೆದುಕೊಂಡ ವಿದ್ಯಾರ್ಥಿಯು ಪ್ರಥಮ ಭಾಷೆ-ಕನ್ನಡ 125 ಅಂಕಗಳಿಗೆ ಕನಿಷ್ಠ 38 ಮತ್ತು ಇತರೆ ವಿಷಯಗಳಲ್ಲಿ 100 ಅಂಕಗಳಿಗೆ ಕನಿಷ್ಠ 30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಗಳಿಸಿರಬೇಕು.

(ii) ವಿದ್ಯಾರ್ಥಿಯು ತೇರ್ಗಡೆ ಹೊಂದಲು 625 ಅಂಕಗಳಿಗೆ ಕನಿಷ್ಠ 219 ಅಂಕ ಪಡೆದಿರಬೇಕು. (ಶೇ.35) ವಿದ್ಯಾರ್ಥಿಯು ತೇರ್ಗಡೆಗೆ ಪ್ರತಿ ವಿಷಯದಲ್ಲಿ ಶೇ.30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರಬೇಕು.

(iii) ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಪ್ರಥಮ ಭಾಷೆ ಕನ್ನಡ-125 ಅಂಕಗಳಿಗೆ ಕನಿಷ್ಠ-44 ಅಂಕಗಳು ಹಾಗೂ ಇತರೆ ವಿಷಯಗಳಲ್ಲಿ ಕನಿಷ್ಠ 35 ಅಂಕಗಳನ್ನು ಪಡೆದಿರಬೇಕು. ಶೇ.35 ಅಂಕಗಳಿಗಿಂತ ಕಡಿಮೆ ಗಳಿಸಿರುವ ಅಂದರೆ ಪ್ರಥಮ ಭಾಷೆ ಕನ್ನಡ-44 ಅಂಕಗಳಿಗಿಂತ ಕಡಿಮೆ ಮತ್ತು ಇತರೆ ವಿಷಯಗಳಲ್ಲಿ 35 ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರುವ ವಿಷಯಗಳಿಗೆ ಪುನಃ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುವುದು ಕಡ್ಡಾಯವಾಗಿದೆ.

**ಅಂಕಗಳು ಮತ್ತು ದರ್ಜೆಗಳ ವಿವರ:-**

**ಒಟ್ಟು 625 ಅಂಕಗಳಿಗೆ**

| ಕ್ರಮ ಸಂಖ್ಯೆ | ಶೇಕಡ | ದರ್ಜೆ |
|---|---|---|
| 01 | ಶೇಕಡ 85 ಮತ್ತು ಅದಕ್ಕಿಂತ ಮೇಲ್ಪಟ್ಟು | ಡಿಸ್ಟಿಂಕ್‌ಷನ್ |
| 02 | ಶೇಕಡ 60 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 85ರೊಳಗೆ | ಪ್ರಥಮ ದರ್ಜೆ |
| 03 | ಶೇಕಡ 50 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 60ರೊಳಗೆ | ದ್ವಿತೀಯ ದರ್ಜೆ |

**ಒಂದೇ ಬಾರಿಗೆ ತೇರ್ಗಡೆಯಾದವರಿಗೆ ಮಾತ್ರ ದರ್ಜೆ ನೀಡಲಾಗುವುದು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ದರ್ಜೆ ನೀಡಲಾಗುವುದಿಲ್ಲ.**

**III.ಅರ್ಜಿಗಳ ಸ್ವರೂಪ:-**

**ಹೊಸ ವಿದ್ಯಾರ್ಥಿಗಳು:-** ಮಂಡಳಿಯಿಂದ ನಾಮಿನಲ್‌ರೋಲ್ ನೀಡಿರುವಂತೆ ಅರ್ಜಿಗಳು ಓ.ಎಂ.ಆರ್ - OMR (Optical Mark Reader-ಆಪ್ಟಿಕಲ್ ಮಾರ್ಕ್ ರೀಡರ್) ನಮೂನೆಗಳ ರೂಪದಲ್ಲಿರುತ್ತವೆ. ನಾಮಿನಲ್‌ರೋಲ್‌ನಲ್ಲಿ ವಿದ್ಯಾರ್ಥಿಯ ಹೆಸರು, ವಿದ್ಯಾರ್ಥಿಯ ತಂದೆಯ ಹೆಸರು, ತಾಯಿಯ ಹೆಸರು ಮತ್ತು ವಿದ್ಯಾರ್ಥಿಯ ಹುಟ್ಟಿದ ದಿನಾಂಕ ಇತ್ಯಾದಿಗಳನ್ನು 7ನೇ ತರಗತಿಯ ವರ್ಗಾವಣೆ ಪತ್ರದ ಆಧಾರದ ಮೇಲೆ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ

ಕೇಂದ್ರದ ಸಮನ್ವಯಾಧಿಕಾರಿಗಳು ದಾಖಲಿಸುವುದು ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಯ ತಾಯಿಯ ಹೆಸರು 7ನೇ ತರಗತಿಯ ಪ್ರಾಥಮಿಕ ಶಾಲಾ ದಾಖಲಾತಿ ವಹಿಯಲ್ಲಿ ಇಲ್ಲದಿದ್ದರೂ ತಹಶೀಲ್ದಾರರಿಂದ ನೀಡಿರುವ ಯಾವುದೇ ಪ್ರಮಾಣ ಪತ್ರದ ಆಧಾರದ ಮೇಲೆ ನಮೂದಿಸುವುದು. ಆ ಆಧಾರದ ಮೇಲೆ ದೃಢೀಕರಿಸಿ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರಿಗೆ ಸಲ್ಲಿಸುವುದು. ನಾಮಿನಲ್‌ರೋಲ್‌ನಲ್ಲಿರುವಂತೆ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು, ಅವರ ಹಂತದಲ್ಲಿ ವಿದ್ಯಾರ್ಥಿಯ ನಿಖರವಾದ ಮಾಹಿತಿಯನ್ನು ಅತಿ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಆಯಾ ಬಾಕ್ಸ್‌ಗಳಲ್ಲಿ ಶೇಡ್ ಮಾಡಬೇಕು. ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ತಪ್ಪು ಶೇಡ್ ಮಾಡಿದಲ್ಲಿ ವಿದ್ಯಾರ್ಥಿಗೆ ತೊಂದರೆಯಾಗುತ್ತದೆ. ತಪ್ಪು ಶೇಡ್ ಮಾಡಿದಲ್ಲಿ ಕರ್ನಾಟಕ ಮುಕ್ತ ಶಾಲೆ ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳಿಗೆ ದಂಡ ವಿಧಿಸಲಾಗುವುದು ಮತ್ತು ತಪ್ಪು ಮಾಹಿತಿ ನೀಡಿದಲ್ಲಿ ಮಂಡಳಿಯ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

**ಪುನರಾವರ್ತಿತ ವಿದ್ಯಾರ್ಥಿಗಳು:-**

2018ರ ಜೂನ್ ಮಾಹೆಯಲ್ಲಿ ನಡೆದ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಎಂ.ಎಸ್.ಎಗಳನ್ನು ಇದರೊಡನೆ ಕಳುಹಿಸಲಾಗಿದೆ. ಜೂನ್ 2018ಕ್ಕೂ ಪೂರ್ವದಲ್ಲಿನ ಅನುತ್ತೀರ್ಣ ವಿದ್ಯಾರ್ಥಿಗಳ ಎಂ.ಎಸ್.ಎಗಳು ಕಾರಣಾಂತರಗಳಿಂದ ಲಭ್ಯವಿಲ್ಲದಿದ್ದಲ್ಲಿ ಮಂಡಳಿಗೆ ರೂ.50/- ಶುಲ್ಕ ಪಾವತಿಸಿ ಮುದ್ರಿತ ಎಂ.ಎಸ್.ಎ ಪಡೆಯುವುದು. ಮುದ್ರಿತ ಎಂ.ಎಸ್.ಎ ಭರ್ತಿ ಮಾಡಿ ವಿದ್ಯಾರ್ಥಿಯ ಸಹಿ ಪಡೆದು ಭಾವಚಿತ್ರ ಅಂಟಿಸಿ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದೃಢೀಕರಿಸಿ ಸಲ್ಲಿಸುವುದು. ಬರವಣಿಗೆಯನ್ನು ಉಪಯೋಗಿಸಿ ಭರ್ತಿ ಮಾಡಿರುವ ವಿದ್ಯಾರ್ಥಿಗಳ ಅರ್ಜಿಯನ್ನು ಮಂಡಳಿ ಪರಿಗಣಿಸುವುದಿಲ್ಲ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯು ತಿರಸ್ಕೃತವಾಗುತ್ತದೆ.

ಹೊಸ ವಿದ್ಯಾರ್ಥಿಗಳು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ನಾಮಿನಲ್‌ರೋಲ್ ಸಿದ್ಧಪಡಿಸಿ ಹೊಸ ವಿದ್ಯಾರ್ಥಿಗಳಿಗೆ ಶೇಡ್ ಮಾಡಿದ ಓ.ಎಂ.ಆರ್ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಎಂ.ಎಸ್.ಎಗಳನ್ನು ಕಳುಹಿಸುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಕಳುಹಿಸದೇ ಇದ್ದಲ್ಲಿ ಅರ್ಜಿಗಳು ತಿರಸ್ಕೃತವಾಗುತ್ತವೆ.

ಓ.ಎಂ.ಆರ್ ಮತ್ತು ಎಂ.ಎಸ್.ಎಯಲ್ಲಿ ಭಾವಚಿತ್ರ ಅಂಟಿಸುವುದು ಕಡ್ಡಾಯವಾಗಿದೆ. ಈ ರೀತಿ ಅಂಟಿಸಿರುವ ಭಾವಚಿತ್ರವನ್ನು ಮಾತ್ರ ಪರಿಗಣಿಸಲಾಗುವುದು. ಆದ್ದರಿಂದ ಅತಿ ಜಾಗರೂಕತೆಯಾಗಿ ಆಯಾ ವಿದ್ಯಾರ್ಥಿಯ ಭಾವಚಿತ್ರವನ್ನು ಓ.ಎಂ.ಆರ್‌ನಲ್ಲಿ ಅಂಟಿಸುವುದು ಆದ್ಯತೆಯ ವಿಚಾರವಾಗಿರುತ್ತದೆ. ಪುನರಾವರ್ತಿತ ವಿದ್ಯಾರ್ಥಿಯು ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಂಡ ಸಮಯದಲ್ಲಿ ಓ.ಎಂ.ಆರ್‌ನಲ್ಲಿ ಭಾವಚಿತ್ರ ಅಂಟಿಸಿ ಮಂಡಳಿಗೆ ಸಲ್ಲಿಸಿರುವ ಭಾವಚಿತ್ರವನ್ನು ಮಾತ್ರ ಪರಿಗಣಿಸಲಾಗುವುದು. ಆದಾಗ್ಯೂ ಮಂಡಳಿಯ ಪರಿಶೀಲನೆಗಾಗಿ ಪುನರಾವರ್ತಿತ ವಿದ್ಯಾರ್ಥಿಗಳ ಭಾವಚಿತ್ರವನ್ನು ಎಂ.ಎಸ್.ಎ ಯಲ್ಲಿ ಕಡ್ಡಾಯವಾಗಿ ಅಂಟಿಸುವುದು. ಯಾವುದೇ ವಿದ್ಯಾರ್ಥಿಯ ಭಾವಚಿತ್ರವಿಲ್ಲದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು. **ಓ.ಎಂ.ಆರ್ ಮತ್ತು ಎಂ.ಎಸ್.ಎ ಯಲ್ಲಿ ಬದಲಿ ಭಾವಚಿತ್ರವನ್ನು ಲಗತ್ತಿಸಿ ನಕಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೇರವಾಗುವ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳ ಮೇಲೆ ನಿಯಮಾನುಸಾರ ಕಠಿಣ ಕ್ರಮಜರುಗಿಸಲಾಗುವುದು.**

**IV. ಪರೀಕ್ಷಾ ಶುಲ್ಕ:-**

ಸರ್ಕಾರದ ಆದೇಶ ಸಂಖ್ಯೆ:ಇಡಿ.218.ಎಸ್.ಎಲ್.ಬಿ2016; ದಿನಾಂಕ:14.12.2016ರನ್ವಯ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಈ ಕೆಳಕಂಡಂತೆ ಶುಲ್ಕ ಪರಿಷ್ಕರಿಸಲಾಗಿದೆ.

| ಕ್ರಮ ಸಂಖ್ಯೆ | ವಿವರ | ಶುಲ್ಕದ ಮೊತ್ತ |
|---|---|---|
| 01 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಲ್ಯಾಮಿನೇಷನ್ ಶುಲ್ಕ ಸೇರಿ | 1203/- |
| 02 | ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳಿಗೆ<br>ಅ) ಒಂದು ವಿಷಯಕ್ಕೆ<br>ಆ) ಎರಡು ವಿಷಯಗಳಿಗೆ<br>ಇ) ಮೂರು ವಿಷಯಗಳಿಗೆ<br>ಈ) ನಾಲ್ಕು ಮತ್ತು ಅದಕ್ಕೂ ಮೇಲ್ಪಟ್ಟ ವಿಷಯಗಳಿಗೆ | 300/-<br>500/-<br>700/-<br>1180/- |

- ಹೊಸ ಮತ್ತು ಪುನರಾವರ್ತಿತ ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಒಟ್ಟಿಗೆ ಲೆಕ್ಕಾಚಾರ ಮಾಡಿ NEFT CHALLAN ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಬೇಕು. ಪಾವತಿಸುವ ಚಲನ್‌ನಲ್ಲಿ ವಿವರಗಳನ್ನು ನಮೂದಿಸಬೇಕು. ಭರ್ತಿ ಮಾಡಿದ NEFT CHALLAN ಒಂದನ್ನು ಬ್ಯಾಂಕಿನವರು ಇಟ್ಟುಕೊಂಡು, ನೀಡುವ ಮತ್ತೊಂದು ಭಾಗದ ಮೂಲ ಚಲನ್ ಮಂಡಳಿಗೆ ಕಳುಹಿಸಬೇಕು. ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು TSL or UTR ಸಂಖ್ಯೆ ಇರುವುದನ್ನು ಖಾತ್ರಿಪಡಿಸಿಕೊಳ್ಳುವುದು. ಕಲಿಕಾ ಕೇಂದ್ರದ ದಾಖಲಾತಿಗಾಗಿ ಛಾಯಾಪ್ರತಿಯನ್ನು ಸುರಕ್ಷಿತವಾಗಿ ಸಂರಕ್ಷಿಸಿಕೊಳ್ಳತಕ್ಕದ್ದು.

**ಪರೀಕ್ಷಾ ಅರ್ಜಿಗಳನ್ನು, (ಓ.ಎಂ.ಆರ್, ಎಂ.ಎಸ್.ಎ, NEFT CHALLAN) ಗಳನ್ನು ಮಂಡಳಿಗೆ ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ.**

| ಕ್ರಮ ಸಂಖ್ಯೆ | ವಿವರ | ನಿಗಧಿಪಡಿಸಲಾದ ಅಂತಿಮ ದಿನಾಂಕ |
|---|---|---|
| 01 | ವಿದ್ಯಾರ್ಥಿಗಳು/ಪರೀಕ್ಷಾರ್ಥಿಗಳು ದಂಡ ಶುಲ್ಕ ರಹಿತವಾಗಿ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 19.01.2019 |
| 02 | ವಿದ್ಯಾರ್ಥಿಗಳು/ಪರೀಕ್ಷಾರ್ಥಿಗಳು ದಂಡ ಶುಲ್ಕ ಸಹಿತವಾಗಿ (ಒಂದು ದಿನಕ್ಕೆ ರೂ.150/- ರಂತೆ) ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 29.01.2019 |
| 03 | NEFT CHALLAN ಮೂಲಕ ಪರೀಕ್ಷಾ ಶುಲ್ಕ ಬ್ಯಾಂಕಿಗೆ ಜಮಾ ಮಾಡಲು ಕೊನೆಯ ದಿನಾಂಕ | 31.01.2019 |
| 04 | ನಾಮಿನಲ್‌ರೋಲ್, ಓ.ಎಂ.ಆರ್, ಎಂಎಸ್‌ಎ ಹಾಗೂ ಬ್ಯಾಂಕ್ NEFT CHALLAN ಮೂಲ ಪ್ರತಿ ಇತ್ಯಾದಿಗಳನ್ನು ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರಿಗೆ ತಲುಪಿಸುವ ದಿನಾಂಕ | 05.02.2019 |
| 05 | ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಮೇಲು ಸಹಿಯೊಂದಿಗೆ ನಾಮಿನಲ್‌ರೋಲ್, ಓ.ಎಂ.ಆರ್, ಎಂಎಸ್‌ಎ, NEFT CHALLANಗಳನ್ನು ಮಂಡಳಿಗೆ ತಲುಪಿಸಬೇಕಾದ ಕೊನೆಯ ದಿನಾಂಕ | 12.02.2019 |

V. **ನೋಂದಣಿ ಶುಲ್ಕ ಮತ್ತು ನವೀಕರಣ ಶುಲ್ಕ:-**

ಹೊಸದಾಗಿ ಪ್ರಾರಂಭವಾಗಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ಶಾಲಾ ಸಂಕೇತ ಪಡೆಯಲು ಮಂಡಳಿಗೆ ರೂ.1000/- ನೋಂದಣಿ ಶುಲ್ಕ NEFT CHALLAN ಮುಖಾಂತರ ಕಡ್ಡಾಯವಾಗಿ ಪಾವತಿಸುವುದು ಹಾಗೂ ಎಲ್ಲಾ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳುರವರು ನೋಂದಣಿ ನವೀಕರಣ ಶುಲ್ಕ ರೂ.1000/- ಪ್ರತಿ ವರ್ಷಕ್ಕೊಮ್ಮೆ ಮಾರ್ಚ್/ಏಪ್ರಿಲ್ ಪರೀಕ್ಷೆಗೆ ಸಲ್ಲಿಸುವುದು. ಕಡ್ಡಾಯವಾಗಿದೆ. ಇಲ್ಲವಾದಲ್ಲಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಂದ ಕಳುಹಿಸುವ ಪರೀಕ್ಷಾ ಅರ್ಜಿ, ನಾಮಿನಲ್‌ರೋಲ್ ಯಾವುದೇ ಹಿಂಬರಹ ನೀಡದೆ ತಿರಸ್ಕರಿಸಲಾಗುವುದು.

VI. **ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿ:-**

ಭಾರತ ಸರ್ಕಾರದ Ministry of Social Justice and Empowerment Department of Disability Affairs ಸಂಸ್ಥೆಯ ಪತ್ರ ಸಂಖ್ಯೆ: F.NO.16-110/2003-DDIII ದಿನಾಂಕ:26.02.2013 ಹಾಗೂ ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸುತ್ತೋಲೆ ಸಂಖ್ಯೆ ವಿಹಿನಾಸಿಇ/ಅಧಿನಿಯಮ/07/2012-13; ದಿನಾಂಕ:20.05.2013ರನ್ವಯ ಕೆಳಕಂಡ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ.

1. **ಸರ್ಕಾರದ ಆದೇಶದ ಸಂಖ್ಯೆ:ಮಮ65ಪಿಹೆಚ್‌ಪಿ2000, ಬೆಂಗಳೂರು ದಿನಾಂಕ:10.03.2000 ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್/ಕಿವುಡು/ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿ ಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆಯ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದ ಎರಡು ಭಾಷಾ ವಿಷಯಗಳಿಗೆ ವಿನಾಯಿತಿ ಇರುತ್ತದೆ.** ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ ಪಡೆದುಕೊಂಡು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ಮುಖಾಂತರ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು. ಈ ವಿಷಯದಲ್ಲಿ ಅಂತಹ ವಿದ್ಯಾರ್ಥಿಯ, ಪೋಷಕರಿಗೆ ಅನಾವಶ್ಯಕ ತೊಂದರೆ ನೀಡಬಾರದಾಗಿ ತಿಳಿಸಿದೆ.
2. ಭಾಷಾ ವಿನಾಯಿತಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರು ಕೂಲಂಕಷವಾಗಿ ಪರಿಶೀಲಿಸಿ ವಿನಾಯಿತಿ ನೀಡುವ ಭಾಷಾ ವಿಷಯ ಮತ್ತು ವಿಷಯ ಸಂಕೇತಗಳನ್ನು ವಿವರಿಸಿರಬೇಕು. ವಿಕಲಚೇತನ (Physical Challenged) ಮತ್ತು ಅಂಧ ವಿದ್ಯಾರ್ಥಿಗಳಿಗೆ (Blind) ಭಾಷಾ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದಂತೆ ನೀಡುವ ಸೌಲಭ್ಯಗಳನ್ನು ವಿವರಿಸಿದ್ದು, ಅದರಂತೆ ಕ್ರಮವಹಿಸುವುದು.
3. ವಿಕಲಚೇತನ ಮಕ್ಕಳು ಬರಹಗಾರರ/ಓದುಗಾರರ ಸಹಾಯಕರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಬರಹಗಾರರ/ಓದುಗಾರರ ಆಯ್ಕೆ ಮಾಡಿಕೊಳ್ಳುವುದು ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟಿದ್ದು, ಅವರಿಗೆ ಯಾವುದೇ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ನಿಗದಿಪಡಿಸುವಂತಿಲ್ಲ. ಬರಹಗಾರರ/ಓದುಗಾರರ ಸಹಾಯಕರನ್ನು ಮಧ್ಯದಲ್ಲಿ ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
4. ವಿಕಲಚೇತನ ಮಕ್ಕಳಿಗೆ 3-00 ಘಂಟೆ ಅವಧಿಯ ಪರೀಕ್ಷೆಗೆ 1-00 ಘಂಟೆ "ಪರಿಹಾರ ಅವಧಿ" (Compensatory time) ಎಂಬುದಾಗಿ ಪರಿಗಣಿಸುವುದು. ಸದರಿ ವಿದ್ಯಾರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿರುವಂತೆ ಮಾಡುವುದು.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ.142.ಯೋಯೋಕ.2009 ದಿನಾಂಕ:16.07.2009ರನ್ವಯ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ನಿಮ್ಹಾನ್ಸ್/ಅಖಿಲ ಭಾರತ ದೃಕ್-ಶ್ರವಣ ಸಂಸ್ಥೆ ಮೈಸೂರು/ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರಜ್ಞರು/ಕನಿಷ್ಠ ಎಂ.ಫಿಲ್ ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್

ಮನಃಶಾಸ್ತ್ರಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ, ಡಿಸ್‌ಲೆಡ್ಸಿಯಾ ಅಸೋಸಿಯೇಷನ್ (ರಿ), ಬೆಂಗಳೂರು ಅಥವಾ ಭಾರತ ದೇಶದ ಯಾವುದೆ ಭಾಗದಿಂದ ಅಧಿಕೃತ ಜಿಲ್ಲಾ ಸರ್ಜನ್‌ಗಿಂತಲೂ ಕಡಿಮೆ ಇಲ್ಲದ ವೈದ್ಯರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಓ.ಎಂ.ಆರ್‌ನೊಂದಿಗೆ ಸಲ್ಲಿಸುವುದು ಕಡ್ಡಾಯ. ತದನಂತರ ವಿನಾಯಿತಿ ಕೋರಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಬಗ್ಗೆ ವಿನಾಯಿತಿ ಪಡೆದುಕೊಳ್ಳಲು ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು, ಪೂರ್ವಭಾವಿ ಕ್ರಮವಹಿಸಿ ಅಂತಹ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯ ಒದಗಿಸಲು ನಿರ್ದೇಶಕರು, ಜೆ.ಎಸ್.ಎಸ್ ಮುಕ್ತ ವಿದ್ಯಾಲಯ, ಮೈಸೂರು ಇವರ ಮುಖಾಂತರ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು.

6. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ142ಯೋಯೋಕಾ 2008 ದಿನಾಂಕ:21.02.2009ರ ಅನ್ವಯ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ವಿದ್ಯಾರ್ಥಿಗಳಲ್ಲಿ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳಿಗೆ (ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆ) ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.
   1. ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.
   2. ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕಠನ್ನು ಪಡೆಯಲು ಅನುಮತಿಸಿದೆ.

**VII.ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯದ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.**

| ನ್ಯೂನತೆ | ಸೌಲಭ್ಯಗಳು/ವಿನಾಯಿತಿಗಳು |
|---|---|
| ಕಿವುಡ ಮತ್ತು ಮೂಗ | • ಶಿಕ್ಷಣದ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ.<br>• ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಕಲಿಕಾ ನ್ಯೂನತೆ/ಡಿಸ್‌ಲೆಡ್ಸಿಯಾ (Dyslexia)<br>Specific learning disability | • ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ಇರುತ್ತದೆ.<br>• ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಅರ್ಥಶಾಸ್ತ್ರ, ಗೃಹವಿಜ್ಞಾನ, ವಾಣಿಜ್ಯ ಅಧ್ಯಯನ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜ ವಿಜ್ಞಾನ ವಿಷಯದ ಜೊತೆಗೆ ಆಯ್ಕೆ ಮಾಡಿಕೊಳ್ಳಬಹುದು.<br>• ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಪಡೆದುಕೊಳ್ಳಲು ಅವಕಾಶವಿರುವುದು.<br>• ಇಂತಹ ಮಕ್ಕಳು ಮಾಡುವ ಸಣ್ಣಮಟ್ಟ ದೋಷಗಳನ್ನು, ಮೌಲ್ಯಮಾಪನದಲ್ಲಿ ಪರಿಗಣಿಸುವುದಿಲ್ಲ.<br>• ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯುಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.<br>• ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಬುದ್ದಿಮಾಂದ್ಯ | • ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ. |

| | |
|---|---|
| ಅಂಧ ವಿದ್ಯಾರ್ಥಿಗಳು/ದೃಷ್ಟಿಮಾಂದ್ಯ ವಿದ್ಯಾರ್ಥಿ/ಕ್ಷೀಣದೃಷ್ಟಿ (Low Vision) | • ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಅರ್ಥಶಾಸ್ತ್ರ, ಗೃಹವಿಜ್ಞಾನ, ವಾಣಿಜ್ಯ ಅಧ್ಯಯನ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜ ವಿಜ್ಞಾನ ವಿಷಯದ ಜೊತೆಗೆ ಆಯ್ಕೆ ಮಾಡಿಕೊಳ್ಳಬಹುದು.<br>• ಬರಹಗಾರರ ಸೌಲಭ್ಯ ನೀಡಲಾಗುವುದು.<br>• ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಮೆದುಳಿನ ಪಾರ್ಶ್ವವಾಯು, ಬಲತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು, ಬಲಗೈ ಇದ್ದ ವ್ಯಕ್ತಿಯು ದಿನನಿತ್ಯದ ಕಾರ್ಯಗಳಿಗೆ ಬಲಗೈಯನ್ನೇ ಬಳಸುತ್ತಿದ್ದು, ಎಡಗೈಯಲ್ಲಿ ಬರೆಯುವ್ವದರಿಂದ ಬರವಣಿಗೆ ನಿಧಾನವಾಗುತ್ತದೆ ಎನ್ನುವವರಿಗೆ | • ಹೆಚ್ಚುವರಿ ಸಮಯ ನೀಡುವ ಸೌಲಭ್ಯ:-<br>• 2.30 ಹಾಗೂ 3.00 ಗಂಟೆಗಳ ಅವಧಿಯ ಪ್ರಶ್ನೆಪತ್ರಿಕೆಗೆ ಒಂದು ಗಂಟೆ.<br>• 2.00 ಗಂಟೆಗಳ ಅವಧಿಯ ಪ್ರಶ್ನೆಪತ್ರಿಕೆಗೆ 45 ನಿಮಿಷಗಳು.<br>• ಒಂದು ಗಂಟೆಯ ಅವಧಿಯ ಪ್ರಶ್ನೆಪತ್ರಿಕೆಗೆ 30 ನಿಮಿಷಗಳು. |
| ಎಲ್ಲಾ ರೀತಿಯ ನ್ಯೂನ್ಯತೆ | • ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯು ಸೂಕ್ತ ಆಸನ ವ್ಯವಸ್ಥೆ ಮಾಡುವುದು. |

**ಪರೀಕ್ಷಾ ಸಮಯದಲ್ಲಿ ಸೆರೆಬ್ರಲ್‌ಪಾಲ್ಸಿ, ಆರ್ಟಿಸಂ, ಪಾರ್ಶ್ವವಾಯು, ಕುಷ್ಠರೋಗ ಹಾಗೂ ವಿವಿಧ ಇತರೆ ನ್ಯೂನತೆಯಿರುವ ವಿದ್ಯಾರ್ಥಿ ಸೌಲಭ್ಯ ಪಡೆಯಲು ಅಪೇಕ್ಷಿಸಿದರೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಹೆಚ್ಚುವರಿ ಸಮಯ ಬರಹಗಾರರ, ಓದುಗಾರರ ಸೌಲಭ್ಯ ನೀಡುವ ಅಧಿಕಾರ ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಇರುತ್ತದೆ.**

**VIII. ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರಯತ್ನಗಳ ಮಿತಿ ನಿಗಧಿಗೊಳಿಸುವ ಬಗ್ಗೆ:-**

ಸರ್ಕಾರದ ಆದೇಶ ಸಂಖ್ಯೆ:ಇಡಿ.209.ಎಸ್.ಎಲ್.ಬಿ2013; ದಿನಾಂಕ:06.12.2014ರನ್ವಯ ಮಾರ್ಚ್ 2015ರ ಪರೀಕ್ಷೆಯಿಂದ ಜಾರಿಗೆ ಬರುವಂತೆ, ಕರ್ನಾಟಕ ಮುಕ್ತ ಶಾಲೆಯ-ಕೆ.ಓ.ಎಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಯ ಪ್ರಥಮ ಬಾರಿಗೆ ತೆಗೆದುಕೊಂಡಿರುವ ಪರೀಕ್ಷೆಯೂ ಸೇರಿದಂತೆ ಆರು ಸತತ ಪ್ರಯತ್ನಗಳಲ್ಲಿ ತೇರ್ಗಡೆ ಹೊಂದಬೇಕು ಎಂದು ಪ್ರಯತ್ನಗಳ ಮಿತಿಯನ್ನು ನಿಗಧಿಪಡಿಸಿ ಆದೇಶಿಸಿದೆ. ಸದರಿ ವಿದ್ಯಾರ್ಥಿಗೆ ಸರ್ಕಾರ ಒದಗಿಸಿರುವ ಆರು ಸತತ ಪ್ರಯತ್ನಗಳಲ್ಲಿ ವಿದ್ಯಾರ್ಥಿಯು ಸ್ವಕಾರಣಗಳಿಂದ ಯಾವುದಾದರೂ ಪರೀಕ್ಷೆ ತೆಗೆದುಕೊಳ್ಳದೇ ಇದ್ದಲ್ಲಿ ಆ ಪರೀಕ್ಷೆಯನ್ನು ಕೂಡ ಒಂದು ಪ್ರಯತ್ನ (Attempt) ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು.

**ಮೇಲ್ಕಂಡ ಸರ್ಕಾರದ ಆದೇಶದಂತೆ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಆರು ಪ್ರಯತ್ನಗಳ ಮಿತಿ ಅನ್ವಯಿಸಬೇಕಾಗಿರುವ ವಿವರ.**

| ಕ್ರಮ ಸಂಖ್ಯೆ | ವಿದ್ಯಾರ್ಥಿಯು ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಂಡಿರುವ ವರ್ಷ | ಆರು ಪ್ರಯತ್ನಗಳ ಮಿತಿಗೆ ಒಳಪಡುವ ವಿದ್ಯಾರ್ಥಿಗಳು ಮತ್ತು ವರ್ಷ |
|---|---|---|
| 01 | ಪ್ರಥಮ ಬಾರಿಗೆ ಮಾರ್ಚ್ 2015ರಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು ಅನುತ್ತೀರ್ಣ ಹೊಂದಿದ್ದಲ್ಲಿ | ಜೂನ್ 2017ರ ಪೂರಕ ಪರೀಕ್ಷೆಗೆ ಆರು ಪ್ರಯತ್ನಗಳ ಮಿತಿ ಮುಕ್ತಾಯವಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು, ಅನುತ್ತೀರ್ಣ ಹೊಂದಿದ್ದಲ್ಲಿ ಅವರುಗಳು ಪುನಃ ಪರೀಕ್ಷೆ ಬರೆಯಲು ಬಯಸಿದಲ್ಲಿ ಹೊಸದಾಗಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ದಾಖಲಾತಿಯಾಗಿ ಎಲ್ಲಾ ವಿಷಯಗಳಿಗೂ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುತ್ತದೆ. |

| | | |
|---|---|---|
| 02 | ಪ್ರಥಮ ಬಾರಿಗೆ ಮಾರ್ಚ್ 2016ರಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು ಅನುತ್ತೀರ್ಣ ಹೊಂದಿದ್ದಲ್ಲಿ | ಜೂನ್ 2018ರ ಪರೀಕ್ಷೆ ಆರು ಪ್ರಯತ್ನಗಳ ಅಂತಿಮ ಪ್ರಯತ್ನವಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು, ಅನುತ್ತೀರ್ಣ ಹೊಂದಿದ್ದಲ್ಲಿ ಅವರುಗಳು ಪುನಃ ಪರೀಕ್ಷೆ ಬರೆಯಲು ಬಯಸಿದಲ್ಲಿ ಹೊಸದಾಗಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ದಾಖಲಾತಿಯಾಗಿ ಎಲ್ಲಾ ವಿಷಯಗಳಿಗೂ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುತ್ತದೆ. |
| 03 | ಪ್ರಥಮ ಬಾರಿಗೆ ಮಾರ್ಚ್ 2017ರಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು ಅನುತ್ತೀರ್ಣ ಹೊಂದಿದ್ದಲ್ಲಿ | ಜೂನ್ 2019ರ ಪರೀಕ್ಷೆಗೆ ಆರು ಪ್ರಯತ್ನಗಳ ಅಂತಿಮ ಪ್ರಯತ್ನವಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು, ಅನುತ್ತೀರ್ಣ ಹೊಂದಿದ್ದಲ್ಲಿ ಅವರುಗಳು ಪುನಃ ಪರೀಕ್ಷೆ ಬರೆಯಲು ಬಯಸಿದಲ್ಲಿ ಹೊಸದಾಗಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ದಾಖಲಾತಿಯಾಗಿ ಎಲ್ಲಾ ವಿಷಯಗಳಿಗೂ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುತ್ತದೆ. |

ಮೇಲೆ ವಿವರಿಸಿದಂತೆ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ನಿಗಧಿಪಡಿಸಲಾದ ಅವಧಿಯಲ್ಲಿ ಪರೀಕ್ಷೆ ಬರೆದು ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿಲ್ಲದಿದ್ದಲ್ಲಿ ವಿದ್ಯಾರ್ಥಿಯು ತೇರ್ಗಡೆ ಹೊಂದಿದ ವಿಷಯಗಳು ಸಹ ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಅಂತಹ ವಿದ್ಯಾರ್ಥಿಗಳು ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆ ತೆಗೆದುಕೊಳ್ಳಲು ಅಪೇಕ್ಷಿಸಿದಲ್ಲಿ ಪುನಃ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ಹೊಸದಾಗಿ ದಾಖಲಾತಿಯಾಗಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಎಲ್ಲಾ ವಿಷಯಗಳಿಗೆ ಹೊಸದಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುವುದು.

## IX. ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ.

1. ಮಂಡಳಿಯ ನಿಯಮದಂತೆ, ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯ ಬಯಸುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ವಿದ್ಯಾರ್ಥಿಗಳು ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಯನ್ನು ಮೊದಲನೇ ಬಾರಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಿದ್ದು, ತೇರ್ಗಡೆಯಾದ ಎರಡು ವರ್ಷಗಳ ಅವಧಿಯಲ್ಲಿ ಯಾವುದಾದರೂ ವಿಷಯ ಅಥವಾ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ. ತೇರ್ಗಡೆಯಾದ ವಿದ್ಯಾರ್ಥಿಗಳು ಮರು ಪ್ರಯತ್ನದಲ್ಲಿ ಮೊದಲನೆ ಪ್ರಯತ್ನದಲ್ಲಿನ ಅಂಕಗಳಿಗಿಂತ ಕಡಿಮೆ ಅಂಕಗಳಿಸಿದಲ್ಲಿ ಮೊದಲನೆ ಪ್ರಯತ್ನದಲ್ಲಿ ಗಳಿಸಿರುವ ಅಂಕಗಳನ್ನು ಉಳಿಸಿಕೊಳ್ಳಬಹುದಾಗಿದೆ.

**ಅನುಸರಿಸಬೇಕಾದ ಕ್ರಮಗಳು:-**

- ಬಿಳಿ ಹಾಳೆಯಲ್ಲಿ ಅರ್ಜಿ ಬರೆದು ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದೃಢೀಕರಿಸಿ, ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಮುಖಾಂತರ ಮಂಡಳಿಗೆ ನಿಗಧಿತ ಶುಲ್ಕದೊಂದಿಗೆ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು.
- ಮಂಡಳಿಯಿಂದ ಅನುಮತಿ ಪಡೆದ ನಂತರ ಪರೀಕ್ಷಾ ಶುಲ್ಕ ಪಾವತಿಸಬೇಕು.
- ಹಿಂದೆ ವ್ಯಾಸಂಗ ಮಾಡಿದ ಕಲಿಕಾ ಕೇಂದ್ರಗಳಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಈ ಕಲಿಕಾ ಕೇಂದ್ರಕ್ಕೆ ನಿಗಧಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.

- ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಅಥವಾ ಉದ್ಯೋಗಕ್ಕೆ ಸೇರಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
- ಪ್ರಯತ್ನದ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಬಹುದು.
- ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ನಿಗಧಿತ ಅವಧಿಯೊಳಗೆ ಮಂಡಳಿಗೆ ಸಲ್ಲಿಸುವುದು.

**X. ಅರ್ಜಿಗಳನ್ನು ಸಲ್ಲಿಸಲು ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಪಾಲಿಸಬೇಕಾದ ಸೂಚನೆಗಳು:-**

1. ಓ.ಎಂ.ಆರ್ ಅರ್ಜಿಗಳನ್ನು Staple ಮಾಡುವುದಾಗಲಿ, ಪಂಚ್ ಮಾಡಿ ಟ್ಯಾಗ್‌ನಿಂದ ಕಟ್ಟುವುದಾಗಲಿ ಕಡ್ಡಾಯವಾಗಿ ಮಾಡುವಂತಿಲ್ಲ. ಎಣಿಕೆ ಸಂಬಂಧವಾಗಿ ಪೆನ್ಸಿಲ್‌ನಿಂದಾಗಿ ಬರೆಯುವಂತಿಲ್ಲ ಇದನ್ನು ಎಲ್ಲಾ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕು. ಓ.ಎಂ.ಆರ್ ಅರ್ಜಿ ಬದಿಯಲ್ಲಿರುವ ಟೈಮರ್ಸ್‌ಗಳ ಮೇಲೆ ಬರೆಯುವುದು ಅಥವಾ ಘೋಕರ್‌ನಿಂದ ಚುಚ್ಚಿ ಹಾಳು ಮಾಡುವುದು ಇಂತಹವುಗಳನ್ನು ಯಾವುದೇ ಕಾರಣಗಳಿಂದ ಮಾಡತಕ್ಕದ್ದಲ್ಲ. ಈ ರೀತಿ ಮಾಡಿದಲ್ಲಿ ವಿದ್ಯಾರ್ಥಿಯ ಡೇಟಾ, ಸ್ಕ್ಯಾನ್ ಆಗುವುದಿಲ್ಲ.

2. ಹೊಸ ವಿದ್ಯಾರ್ಥಿಗಳ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳ ನಾಮಿನಲ್‌ರೋಲ್ ಪ್ರತ್ಯೇಕವಾಗಿ ಸಿದ್ದಪಡಿಸಬೇಕು.

3. ಪುನರಾವರ್ತಿತ ವಿದ್ಯಾರ್ಥಿಗಳಿಗೆ ಎಂ.ಎಸ್.ಎಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಪ್ರಿಪ್ರಿಂಟೆಡ್ ಎಂ.ಎಸ್.ಎ ಲಭ್ಯವಿಲ್ಲದಿದ್ದಲ್ಲಿ, ರೂ.50 ಶುಲ್ಕವನ್ನು ಪರೀಕ್ಷಾ ಮಂಡಳಿಗೆ NEFT CHALLAN ಮುಖಾಂತರ ಪಾವತಿಸಿ ಪ್ರಿಪ್ರಿಂಟೆಡ್ ಎಂ.ಎಸ್.ಎ ಪ್ರತಿಯನ್ನು ಪಡೆದು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು ಕಡ್ಡಾಯ.

4. ಇತ್ತೀಚಿನ ಪಾಸ್‌ಪೋರ್ಟ್ ಬಹು ವರ್ಣದ (ಕಲರ್ ಫೋಟೋ) ಭಾವಚಿತ್ರದೊಂದಿಗೆ OMR, MSA ಗಳನ್ನು ಸಲ್ಲಿಸುವುದು ಕಡ್ಡಾಯ. **ಕೇವಲ ಶುಲ್ಕವನ್ನು ವಸೂಲಿ ಮಾಡಿ ಭಾವಚಿತ್ರ ರಹಿತವಾಗಿ ಸಲ್ಲಿಸುವ OMR, MSA** ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಆದ್ದರಿಂದ ವಿದ್ಯಾರ್ಥಿಗಳಿಂದ ಫೋಟೋ ಮತ್ತು ಶುಲ್ಕಗಳನ್ನು ಏಕಕಾಲದಲ್ಲಿ ಸ್ವೀಕರಿಸಲು ಕ್ರಮಕೈಗೊಳ್ಳತಕ್ಕದ್ದು.

5. ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳ ಸಹಿ ಇಲ್ಲದ, ಭಾವಚಿತ್ರವಿಲ್ಲದ OMR, MSA ಗಳನ್ನು ತಿರಸ್ಕರಿಸಲಾಗುವುದು.

6. ವಿದ್ಯಾರ್ಥಿಗಳ ಮೂರು ಬಹುವರ್ಣದ ಇತ್ತೀಚಿನ ಭಾವಚಿತ್ರಗಳನ್ನು ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಸಂಗ್ರಹಿಸಿ, ಎರಡು ಭಾವಚಿತ್ರಗಳನ್ನು ಮಂಡಳಿಯಿಂದ ಬರುವ ಓ.ಎಂ.ಆರ್ ಫಾರಂನಲ್ಲಿ ಭಾವಚಿತ್ರಕ್ಕಾಗಿ ನಿಗದಿಪಡಿಸಿರುವ ಅಂಕಣದಲ್ಲಿ ಅಂಟಿಸಿ ಒಂದು ಭಾವಚಿತ್ರದ ಮೇಲೆ ಮಾತ್ರ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳ ರುಜು ಹಾಗೂ ಕಲಿಕಾ ಕೇಂದ್ರದ ಮೊಹರು ನಮೂದಿಸಬೇಕು. ಮತ್ತೊಂದು ಭಾವಚಿತ್ರವನ್ನು ಕಲಿಕಾ ಕೇಂದ್ರದ ಆಲ್ಬಂನಲ್ಲಿ ಸಂಗ್ರಹಿಸಿಡಬೇಕು. ಭಾವಚಿತ್ರವನ್ನು ಅಂಟಿಸಲು ಬಳಸುವ ಗಮ್ ಉತ್ತಮ ಗುಣಮಟ್ಟದಲ್ಲಿರಬೇಕು. ಭಾವಚಿತ್ರದ ನಾಲ್ಕು ತುದಿಗಳು ಭದ್ರವಾಗಿ ಅಂಟಿಕೊಂಡಿರಬೇಕು. ಸ್ಟೇಪಲ್ ಬಳಸಬಾರದು.

7. ಪುನರಾವರ್ತಿತ ವಿದ್ಯಾರ್ಥಿಗಳ ಎಂ.ಎಸ್.ಎ ಗಳಲ್ಲಿ ನಿಗಧಿತ ಸ್ಥಳದಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ಸಹಿ ಪಡೆಯಬೇಕು. ಯಾವ ಕಾರಣಕ್ಕೂ ಭಾವಚಿತ್ರಗಳ ಮೇಲೆ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳ ರುಜು ಹಾಗೂ ಕಲಿಕಾ ಕೇಂದ್ರದ ಮೊಹರು ಹಾಕತಕ್ಕದ್ದಲ್ಲ.

8. ಪರೀಕ್ಷಾ ಮಂಡಳಿಯಿಂದ ಪಡೆದ ಎಲ್ಲಾ ಓ.ಎಂ.ಆರ್ ಅರ್ಜಿಗಳನ್ನು ಪೂರ್ಣವಾಗಿ ಹಿಂದಿರುಗಿಸಬೇಕು. ಯಾವುದೇ ಕಾರಣಗಳಿಂದ ಓ.ಎಂ.ಆರ್ ಗಳನ್ನು ಕಲಿಕಾ ಕೇಂದ್ರಗಳಲ್ಲಿ ಇಟ್ಟುಕೊಳ್ಳುವಂತಿಲ್ಲ ಬಾಕಿ ಉಳಿದ ಓ.ಎಂ.ಆರ್ ಅರ್ಜಿಗಳನ್ನು ಮಂಡಳಿಗೆ ಹಿಂತಿರುಗಿಸುವುದು ಕಡ್ಡಾಯ.

**XI. ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರು ಪಾಲಿಸಬೇಕಾದ ಸೂಚನೆಗಳು:-**

1. ಮಾರ್ಚ್ 01.03.2019ಕ್ಕೆ 15 ವರ್ಷಗಳ ವಯೋಮಿತಿ ಪೂರ್ಣಗೊಂಡಿರುವ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಮಾತ್ರ ಸಲ್ಲಿಸಬೇಕು. ಇಲ್ಲವಾದಲ್ಲಿ ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯರವರ ಹಂತದಲ್ಲೇ ತಿರಸ್ಕರಿಸುವುದು.
2. ವಿದ್ಯಾರ್ಥಿಯ ದಾಖಲಾತಿಯನ್ನು, 7ನೇ ತರಗತಿಯ ಮೂಲ ವರ್ಗಾವಣೆಯ ಪ್ರಮಾಣ ಪತ್ರದಲ್ಲಿರುವಂತೆ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮದಿನಾಂಕ ಇವುಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು. ಒಂದು ವೇಳೆ ತಪ್ಪಿದ್ದಲ್ಲಿ ಸರಿಪಡಿಸಿ ದೃಢೀಕರಿಸುವುದು. ಸದರಿ ಮಾಹಿತಿಯನ್ನು ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಮತ್ತು ಕಲಿಕಾ ಕೇಂದ್ರಗಳಲ್ಲಿ ಸುರಕ್ಷಿತವಾಗಿಡತಕ್ಕದ್ದು. ನಾಮಿನಲ್‌ರೋಲ್‌ಗಳನ್ನು ತಪ್ಪದೇ ಮೇಲು ಸಹಿ ಮಾಡಿ ಮಂಡಳಿಗೆ ಸಲ್ಲಿಸುವುದು.
3. ವಿದ್ಯಾರ್ಥಿಯ ದಾಖಲಾತಿ ಹಾಗೂ ಕಲಿಕಾ ಕೇಂದ್ರದ ನೋಂದಣಿ ಬಗೆಗಿನ ಎಲ್ಲಾ ಮಾಹಿತಿಗಳನ್ನು ನಿರ್ದೇಶಕರು, ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಮೈಸೂರು ರವರೇ ಕಳುಹಿಸತಕ್ಕದ್ದು.
4. ಖಾಲಿ ಎಂ.ಎಸ್.ಎಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸಿರುವುದನ್ನು ಪರಿಶೀಲಿಸಿ ಅವರ ಹಂತದಲ್ಲೇ ಪರೀಕ್ಷಾ ಅರ್ಜಿ ತಿರಸ್ಕರಿಸುವುದು.
5. ಓ.ಎಂ.ಆರ್ ಮತ್ತು ಎಂ.ಎಸ್.ಎಯಲ್ಲಿ ಭಾವಚಿತ್ರವನ್ನು ಅಂಟಿಸುವುದು ಕಡ್ಡಾಯವಾಗಿದೆ. ಭಾವಚಿತ್ರವಿಲ್ಲದ ಯಾವುದೇ ಪರೀಕ್ಷಾ ಅರ್ಜಿಯನ್ನು ತಿರಸ್ಕರಿಸುವುದು. ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಹೊಸ ವಿದ್ಯಾರ್ಥಿಗಳಿಗೆ ಓ.ಎಂ.ಆರ್‌ನಲ್ಲಿ ಮತ್ತು ಎಂ.ಎಸ್.ಎನಲ್ಲಿ ಅಂಟಿಸಿರುವ ಭಾವಚಿತ್ರವು ನೈಜ ವಿದ್ಯಾರ್ಥಿಯ ಭಾವಚಿತ್ರವೆಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಈ ರೀತಿ ಪರಿಶೀಲಿಸದೇ ಲೋಪದೋಷಗಳು ಕಂಡುಬಂದಲ್ಲಿ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರನ್ನು ಜವಾಬ್ದಾರರನ್ನಾಗಿಸಲಾಗುವುದು.
6. ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು NEFT CHALLAN ಮುಖಾಂತರ ಮಂಡಳಿಗೆ ಪಾವತಿಸಿರುವುದನ್ನು ಪರಿಶೀಲಿಸುವುದು. ನಿಗಧಿತ ದಿನಾಂಕದ ನಂತರ ಬಂದ ಪರೀಕ್ಷಾ ನಾಮಿನಲ್‌ರೋಲ್‌ಗಳನ್ನು ಕಡ್ಡಾಯವಾಗಿ ತಿರಸ್ಕರಿಸುವುದು.
7. ಹೊಸದಾಗಿ ಕಲಿಕಾ ಕೇಂದ್ರಗಳಿಗೆ ಶಾಲಾ ಸಂಕೇತ ಪಡೆಯಲು ನೋಂದಣಿ ಶುಲ್ಕ ಮತ್ತು ಎಲ್ಲಾ ಕಲಿಕಾ ಕೇಂದ್ರಗಳಿಂದ ನವೀಕರಣ ಶುಲ್ಕ ಮಂಡಳಿಗೆ ಪಾವತಿಸಿರುವುದನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಇಲ್ಲವಾದಲ್ಲಿ, ಅಂತಹ ಕಲಿಕಾ ಕೇಂದ್ರದ ಪರೀಕ್ಷಾ ಅರ್ಜಿ ಮತ್ತು ನಾಮಿನಲ್‌ರೋಲ್‌ಗಳನ್ನು ತಿರಸ್ಕರಿಸುವುದು.
8. ವಿಭಿನ್ನ ಸಾಮರ್ಥ್ಯವುಳ್ಳ (Diffrently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯಗಳ ವಿವರಗಳನ್ನು ನೀಡಲಾಗಿದೆ. ಅದರಂತೆ, ಅಂತಹ ವಿದ್ಯಾರ್ಥಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ದಾಖಲೆಗಳೊಂದಿಗೆ ಮಂಡಳಿಗೆ ಸಲ್ಲಿಸುವುದು.
9. ಫಲಿತಾಂಶ ಉತ್ತಮಪಡಿಸಿಕೊಳ್ಳುವ ವಿದ್ಯಾರ್ಥಿಗಳ ಪ್ರಸ್ತಾವನೆಗಳಿದ್ದಲ್ಲಿ ಸಂಬಂಧಪಟ್ಟ ಕಲಿಕಾ ಕೇಂದ್ರಗಳಿಂದ ಪಡೆದು ಮಂಡಳಿಗೆ ಸಲ್ಲಿಸುವುದು.
10. ಪುನರಾವರ್ತಿತ ವಿದ್ಯಾರ್ಥಿಗಳ ಪ್ರಯತ್ನಗಳ ಮಿತಿಯನ್ನು ಮೇಲೆ ಸೂಚಿಸಿರುವಂತೆ, ಪರಿಶೀಲಿಸಿ ಅರ್ಹರಿರುವವರ ಅರ್ಜಿಗಳನ್ನು ಮಾತ್ರ ಮಂಡಳಿಗೆ ಕಳುಹಿಸುವುದು. ಪ್ರಯತ್ನಗಳ ಮಿತಿಯು ಮುಕ್ತಾಯವಾಗಿರುವ ವಿದ್ಯಾರ್ಥಿಗಳ ಪರೀಕ್ಷಾ

**ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಮಂಡಳಿಗೆ ಕಳುಹಿಸಬಾರದು. ಅನರ್ಹ ವಿದ್ಯಾರ್ಥಿಗಳಿದ್ದಲ್ಲಿ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಹಂತದಲ್ಲಿಯೇ ತಿರಸ್ಕರಿಸುವುದು.**

11. ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ನಿಗಧಿತ ಸಮಯದಲ್ಲಿ ಪಾವತಿಸಿದ್ದಲ್ಲಿ ಮಾತ್ರ ಅಂತಹ ಪರೀಕ್ಷಾ ಅರ್ಜಿಗಳನ್ನು ಮಂಡಳಿಗೆ ಕಳುಹಿಸಬೇಕು ಹಾಗೂ ಪಾವತಿಸಿರುವ ಮೊತ್ತ ಸರಿ ಇದೆಯೇ? ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಈ ರೀತಿ ಪರಿಶೀಲಿಸುವಾಗ ಅನುತ್ತೀರ್ಣರಾಗಿರುವ ಎಲ್ಲಾ ವಿಷಯಗಳಿಗೂ ವಿದ್ಯಾರ್ಥಿ ಪರೀಕ್ಷೆ ತೆಗೆದುಕೊಳ್ಳಬೇಕು ಹಾಗೂ ಅನುತ್ತೀರ್ಣ ಹೊಂದಿರುವ ಎಲ್ಲಾ ವಿಷಯಗಳಿಗೆ ಲೆಕ್ಕಾಚಾರ ಮಾಡಿ ಪರೀಕ್ಷಾ ಶುಲ್ಕ ಪಾವತಿಸುವುದು ಕಡ್ಡಾಯವಾಗಿದೆ. ಈ ರೀತಿ ಪಾವತಿಸದೇ ಇರುವ ಸಂಸ್ಥೆಯ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ಹಂತದಲ್ಲೇ ತಿರಸ್ಕರಿಸುವುದು. ಇಲ್ಲವಾದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದವರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

12. ಹೊಸವಿದ್ಯಾರ್ಥಿ/ಪುನರಾವರ್ತಿತ ವಿದ್ಯಾರ್ಥಿಯ ಪರೀಕ್ಷಾ ಅರ್ಜಿಗಳನ್ನು ಓ.ಎಂ.ಆರ್, ಎಂ.ಎಸ್.ಎ, ನಾಮಿನಲ್‌ರೋಲ್ ಇತ್ಯಾದಿಗಳನ್ನು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ಮುಖಾಂತರವೇ ಮಂಡಳಿಗೆ ಕಳುಹಿಸಬೇಕು. ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ನೇರವಾಗಿ ಮಂಡಳಿಗೆ ಅರ್ಜಿ ಸಲ್ಲಿಸಬಾರದು.

**ಸದರಿ ಪರೀಕ್ಷೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರನ್ನು ಮೊಬೈಲ್ ಸಂಖ್ಯೆ:9535537641 ಮತ್ತು ಸ್ಥಿರ ದೂರವಾಣಿ ಸಂಖ್ಯೆ: 080-23460525 ರಲ್ಲಿ ಸಂಪರ್ಕಿಸ ಬಹುದಾಗಿದೆ.**

**(ಕೆ.ಎಸ್.ಮಣಿ)**
**ನಿರ್ದೇಶಕರು,**
**(ಇತರೆ ಪರೀಕ್ಷೆಗಳು)**

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
2. ರಾಜ್ಯದ ಸಂಬಂಧಪಟ್ಟ ಜಿಲ್ಲೆಗಳ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಕಳುಹಿಸುತ್ತಾ, ಆಯಾ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳಿಗೆ ಅಧಿಸೂಚನೆಯನ್ನು ವಿತರಿಸಿ ಸ್ವೀಕೃತಿ ಪಡೆದು ಮಂಡಳಿಗೆ ಸಲ್ಲಿಸಲು ತಿಳಿಸಿದೆ.
3. ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ, ಸಂಬಂಧಪಟ್ಟ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳಿಗೆ ಸೂಚಿಸಿ ಅಧಿಸೂಚನೆಯಲ್ಲಿ ಸೂಚಿಸಿರುವಂತೆ, ಕ್ರಮಕೈಗೊಳ್ಳಲು ತಿಳಿಸಲು ಸೂಚಿಸಿದೆ.
4. ರಾಜ್ಯದ ಎಲ್ಲಾ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ಕಳುಹಿಸುತ್ತಾ, ತಕ್ಷಣವೇ ಆಯಾ ಜಿಲ್ಲಾ ಡಯಟ್ ಕಛೇರಿಗಳಿಗೆ ಖುದ್ದಾಗಿ ಭೇಟಿ ನೀಡಿ ನಿಮ್ಮ ಕಲಿಕಾ ಕೇಂದ್ರಕ್ಕೆ ಸಂಬಂಧಿಸಿದ ಲಕೋಟೆಯನ್ನು ಸ್ವೀಕರಿಸಿ ಅಗತ್ಯ ಮತ್ತು ತುರ್ತು ಕ್ರಮಕ್ಕಾಗಿ ಕಳುಹಿಸಿದೆ.
5. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರ
# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

ಸಂಖ್ಯೆ: ಕ್ಯೂ9/ಕೆ.ಓ.ಎಸ್/ಪರೀಕ್ಷೆ/ಮಾರ್ಚ್/ಏಪ್ರಿಲ್ 2019/35/2018-19 ದಿನಾಂಕ:17.01.2019

**ಪರಿಷ್ಕೃತ ಸುತ್ತೋಲೆ**

ವಿಷಯ: ಮಾರ್ಚ್/ಏಪ್ರಿಲ್-2019ರ ಮಾಹೆಯಲ್ಲಿ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಯ ಪರೀಕ್ಷಾ ಶುಲ್ಕ ಪಾವತಿಸಲು ಕೊನೆ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಅಧಿಸೂಚನೆ ಸಂಖ್ಯೆ: ಕ್ಯೂ9/ಕೆ.ಓ.ಎಸ್/ಪರೀಕ್ಷೆ/ಮಾರ್ಚ್/ಏಪ್ರಿಲ್ 2019/35/2018-19; ದಿನಾಂಕ:26.12.2018.

***********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಉಲ್ಲೇಖಿತ ಅಧಿಸೂಚನೆಯಲ್ಲಿ ಮಾರ್ಚ್/ಏಪ್ರಿಲ್-2019ರ ಮಾಹೆಯಲ್ಲಿ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿಸಲು, ಎಂ.ಎಸ್.ಎ ಇತ್ಯಾದಿಗಳ ನಿರ್ದೇಶಕರು ಜೆ.ಎಸ್.ಎಸ್ ಮೈಸೂರು ಇವರಿಗೆ ಕಳುಹಿಸುವ ಮತ್ತು ನಿರ್ದೇಶಕರು, ಜೆ.ಎಸ್.ಎಸ್ ಮೈಸೂರು ರವರು ಮಂಡಳಿಗೆ ಕಳುಹಿಸುವ ಬಗ್ಗೆ ಅಂತಿಮ ದಿನಾಂಕ ನಿಗಧಿಗೊಳಿಸಿ ಆದೇಶಿಸಲಾಗಿತ್ತು. ಕಾರಣಾಂತರಗಳಿಂದ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ. ಅದರಂತೆ ಕ್ರಮವಹಿಸುವುದು. ಉಳಿದೆಲ್ಲಾ ಅಂಶಗಳು ದಿನಾಂಕ:26.12.2018ರ ಅಧಿಸೂಚನೆಯಲ್ಲಿರುವಂತೆ ಅನ್ವಯವಾಗುತ್ತವೆ.

| ಕ್ರಮ ಸಂಖ್ಯೆ | ವಿವರ | ನಿಗಧಿಪಡಿಸಲಾದ ಅಂತಿಮ ದಿನಾಂಕ | ಪರಿಷ್ಕರಿಸಿ ಅಂತಿಮಗೊಳಿಸಲಾದ ದಿನಾಂಕ |
|---|---|---|---|
| 01 | ವಿದ್ಯಾರ್ಥಿಗಳು/ಪರೀಕ್ಷಾರ್ಥಿಗಳು ದಂಡ ಶುಲ್ಕ ರಹಿತವಾಗಿ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 19.01.2019 | 29.01.2019 |
| 02 | ಮೇಲ್ಕಂಡಂತೆ ಪಡೆದ ಶುಲ್ಕವನ್ನು ಮಂಡಳಿಗೆ NEFT CHALLAN ಮೂಲಕ ಜಮಾ ಮಾಡಬೇಕಾದ ದಿನಾಂಕ | - | 31.01.2019 |
| 03 | ವಿದ್ಯಾರ್ಥಿಗಳು/ಪರೀಕ್ಷಾರ್ಥಿಗಳು ದಂಡ ಶುಲ್ಕ ಸಹಿತವಾಗಿ (ಒಂದು ದಿನಕ್ಕೆ ರೂ.150/- ರಂತೆ) ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 29.01.2019 | 04.02.2019 |
| 04 | ವಿದ್ಯಾರ್ಥಿಗಳು/ಪರೀಕ್ಷಾರ್ಥಿಗಳು ದಂಡ ಶುಲ್ಕ ಸಹಿತವಾಗಿ ಒಂದು ದಿನಕ್ಕೆ ರೂ.150/- ರಂತೆ ದಂಡ ಶುಲ್ಕವನ್ನು ಮಂಡಳಿಗೆ NEFT CHALLAN ಮೂಲಕ ಜಮಾ ಮಾಡಬೇಕಾದ ದಿನಾಂಕ | 31.01.2019 | 06.02.2019 |
| 05 | ನಾಮಿನಲ್‌ರೋಲ್, ಓ.ಎಂ.ಆರ್, ಎಂಎಸ್ಎ ಹಾಗೂ ಬ್ಯಾಂಕ್ NEFT CHALLAN ಮೂಲ ಪ್ರತಿ ಇತ್ಯಾದಿಗಳನ್ನು ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರಿಗೆ ತಲುಪಿಸುವ ದಿನಾಂಕ | 05.02.2019 | 08.02.2019 |
| 05 | ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಮೇಲು ಸಹಿಯೊಂದಿಗೆ ನಾಮಿನಲ್‌ರೋಲ್, ಓ.ಎಂ.ಆರ್, ಎಂಎಸ್ಎ, NEFT CHALLANಗಳನ್ನು ಮಂಡಳಿಗೆ ತಲುಪಿಸಬೇಕಾದ ಕೊನೆಯ ದಿನಾಂಕ | 12.02.2019 | 14.02.2019 |

(ಕೆ.ಎಸ್.ಮಣಿ)
ನಿರ್ದೇಶಕರು(ಇತ್ತರೆ ಪರೀಕ್ಷೆಗಳು)

ಪ್ರತಿಯನ್ನು:

1. ಗೌರವಗಳೊಂದಿಗೆ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರುರವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಅತಿತುರ್ತು ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಮಂಡಳಿಯು ಸೂಚಿಸಿರುವ ದಿನಾಂಕದಂದೇ ಮಂಡಳಿಗೆ ಎಲ್ಲಾ ದಾಖಲೆಗಳನ್ನು ತಪ್ಪದೇ ಸಲ್ಲಿಸಲು ಕೋರಿದೆ.
3. ರಾಜ್ಯದ ಸಂಬಂಧ ಪಟ್ಟ ಜಿಲ್ಲೆಗಳ ಡಯಟ್, ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಮತ್ತು ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರ ಮಾಹಿತಿಗಾಗಿ ಕಳುಹಿಸಿದೆ.
4. ರಾಜ್ಯದ ಎಲ್ಲಾ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರುರವರ ಮುಖಾಂತರ ಅಗತ್ಯ ಮತ್ತು ತುರ್ತು ಕ್ರಮಕ್ಕಾಗಿ ಕಳುಹಿಸಿದೆ.